ISSN NO : 2230-7850 IMPACT FACTOR : 5.1651 (UIF) VOLUME :8, ISSUE : 8, SEPTEMBER- 2018

INDIAN STREMS RESEARCH JOURNAL

# ಪ್ರಗತಿಶೀಲತೆಯೊಳಗೊಬ್ಬ ಶರಣ ಸಂತ

ಡಾ.ಕೆ.ಚಂದ್ರಕಾಂತ್
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶ್ರೀ.ಡಿ.ದೇವರಾಜ ಅರಸು ಸರ್ಕಾರಿ ಪ್ರಥಮದರ್ಜೆ ಕಾಲೇಜು
ಹುಣಸೂರು, ಮೈಸೂರು ಜಿಲ್ಲೆ.

"ಈ ಲೋಕದಲ್ಲಿ ನಾವು ಬದುಕಿರುವುದು ಕೆಲವು ದಿನಗಳು ಮಾತ್ರ; ಈ ಅರಿವು ಯಾವಾಗಲೂ ಇರಬೇಕು. ಈ ಅಲ್ಪಾವಧಿಯಲ್ಲಿ ಶಕ್ಯವಿದ್ದಷ್ಟು ಒಳ್ಳೆಯಕಾರ್ಯ ಮಾಡಿ, ಸಾಮಾನ್ಯಜನರ ಪ್ರಗತಿಗಾಗಿ ಪ್ರಯತ್ನಿಸಿ ಸದ್ದಿಲ್ಲದೆ ಹೊರಟುಹೋಗಬೇಕು" ಇದು ಬಸವರಾಜ ಕಟ್ಟೀಮನಿಯವರ ಅಂತರಾಳದ ನುಡಿಗಳು. ಇಂತಹ ಶರಣರ ನಡೆ ನುಡಿ ತತ್ತ್ವಕ್ಕೆ ಅನ್ವರ್ಥವಾದಂತೆ ಬಾಳಿಬದುಕಿ ತೋರಿಸಿದವರು ಬಸವರಾಜ ಕಟ್ಟೀಮನಿ ಅವರು. 'ಓದಲು ಯೋಗ್ಯವಾದ ಪುಸ್ತಕವನ್ನು ರಚಿಸು, ಇಲ್ಲವೆ ಪುಸ್ತಕಕ್ಕೆ ಯೋಗ್ಯವಾದ ವಸ್ತುವಾಗುವಂತೆ ಜೀವಿಸು' ಎಂಬ ಪ್ರಸಿದ್ಧ ವಿದ್ವಾಂಸರ ಹೇಳಿಕೆಯಂತೆ ಬಸವರಾಜ ಕಟ್ಟಿಮನಿ ಯೋಗ್ಯಪುಸ್ತಕಗಳನ್ನು ಕನ್ನಡ ಸಾರಸ್ವತಲೋಕಕ್ಕೆ ನೀಡುವುದರೊಂದಿಗೆ ಯೋಗ್ಯ ಪುಸ್ತಕಕ್ಕೆ ವಸ್ತುವಾಗುವಂತೆ ಬಾಳಿ ಬದುಕಿದವರು. ಬೆಳಗಾವಿಯ ಗೋಕಾಕ್‌ನ ಮಲಾಮರಡಿ ಎಂಬ ಕುಗ್ರಾಮದಲ್ಲಿ ಸಿಡಿದ ಈ ಬೆಂಕಿಕಿಡಿ ಮುಂದೆ ಪ್ರಗತಿಶೀಲ ಪಂಥದ ಪ್ರಮುಖ ಬರಹಗಾರನಾಗಿ ಜ್ವಾಲಾಮುಖಿಯಂತೆ ಸ್ಫೋಟಿಸಿದ್ದು ಇಂದು ಇತಿಹಾಸ. ಬಾಳು ಬಡತನದ ಬಿರುಗಾಳಿಗೆ ಸಿಲುಕಿ ನಲುಗಿದರೂ ಮಣಿಯದೆ ನಿಶ್ಚಲತೆಯಿಂದ ಬದುಕಿ ಚಳವಳಿಯೇ ಬದುಕಿನ ಬಂಡವಾಳ ಎಂಬಂತೆ ತಮ್ಮ ಬದುಕು ಬರಹದಲ್ಲಿ ದಿಟ್ಟತನ ಮೆರೆದವರು ಇವರು. ಪರ್ತಕರ್ತರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಬರಹಗಾರರಾಗಿ ಮೂರು ಮಜಲುಗಳಲ್ಲಿ ರೂಪುತಳೆದ ಕಟ್ಟೀಮನಿಯವರು ಆಧುನಿಕ ಕನ್ನಡಸಾಹಿತ್ಯದ ಪ್ರಗತಿಶೀಲ ಸಾಹಿತ್ಯದ ಪ್ರಮುಖ ಸಾಹಿತಿಯಾಗಿ ಕಂಗೊಳಿಸಿದವರು.

ಪ್ರಗತಿಶೀಲ ಹಲವಾರು ಬರಹಗಾರರು ಸಮಾಜದಲ್ಲಿನ ವಸ್ತುಗಳನ್ನು ಅಡಗಿಸಿ ಸಾಹಿತ್ಯ ರಚಿಸಿದರೆ, ಅದೇ ಕಾಲಗಟ್ಟದಲ್ಲಿ ಬಸವರಾಜ ಕಟ್ಟೀಮನಿಯವರು ಸಮಾಜದಲ್ಲಿ ತೊಡಗಿ ಸಾಹಿತ್ಯ ರಚಿಸಿದ್ದು ಅವರ ವಿಶೇಷತೆ. ಅದರಿಂದಾಗಿ ಅವರ ಸಾಹಿತ್ಯರಚನೆ ಬದುಕಿನ ಸಂಘರ್ಷದ ಭಾಗವಾಗಿ ಕಂಗೊಳಿಸುತ್ತದೆ. ಇದರಿಂದ ಸಮಾಜದ ಓರೆಕೋರೆಗಳ ವಸ್ತುನಿಷ್ಠ ಜೀವನದ ಜೀವಂತದರ್ಶನ ಇವರ ಸಾಹಿತ್ಯದಲ್ಲಿದೆ. ಬ್ರಿಟಿಷ್ ಸರ್ಕಾರದ ದಬ್ಬಾಳಿಕೆ, ಢಾಂಬಿಕ ಮಠಾಧೀಶ್ವರ ಬಗ್ಗೆ, ಭ್ರಷ್ಟರಾಜಕಾರಣಿಗಳ ಬೆತ್ತಲೆಸತ್ಯಗಳ ಕರಾಳ ಛಾಯೆಯನ್ನು ಇವರ ಸಾಹಿತ್ಯ ಕೃತಿಗಳು ದರ್ಪಣಾಬಿಂಬದಂತೆ ಸ್ಪಷ್ಟವಾಗಿ ಬಿಂಬಿಸುತ್ತವೆ. " ಒಂದು ಘಟನೆ, ಸನ್ನಿವೇಶ ಅಥವಾ ವಿಷಯ ವಿಚಾರದ ಸುತ್ತ ಹೆಣೆಯಲಾದ ಒಂದು ನಿರ್ದಿಷ್ಟ ಪರಿಣಾಮವನ್ನುಂಟುವಂಥ ಕಥೆ ಸಣ್ಣಕಥೆಯೆನಿಸುತ್ತದೆ.. ಸಣ್ಣಕಥೆಗೊಂದು ಪುಟ್ಟವಸ್ತು, ರಚನೆಯ ಶಿಸ್ತು, ನಿರೂಪಣೆಯ ಸಂಯಮ, ಅಗತ್ಯವಿದ್ದಷ್ಟೆ ಮಾತು–ಪಾತ್ರಗಳು, ಎಲ್ಲವೂ ಕೌತುಕ ಕೌಶಲ್ಯಪೂರ್ಣವಾಗಿರಬೇಕು. ಸಂಕ್ಷಿಪ್ತರೂಪ, ಬಿಗಿಯಾದ ಬಂಧ, ನವಿರಾದ ನಿರೂಪಣೆ, ಹಿತವಾದ ಮಾತು, ಕಲಾತ್ಮಕ ಕೊನೆ ಇವುಗಳಿಂದ ಕಥೆ ಪರಿಪೂರ್ಣತೆ ಸಾಧಿಸಬೇಕು'... 'ಒಳ್ಳೆಯ ವಸ್ತು, ಒಳ್ಳೆಯ ಜನ ಕಂಡರೆ ನನಗೆ ಪ್ರೀತಿ, ಗೌರವ, ವಿಶ್ವಾಸ, ಸಣ್ಣತನ, ಸಂಕುಚಿತತೆ, ಜಾತಿ ಮತ್ಸರ, ಆಷಾಢಭೂತಿತನ, ಸಾಮಾಜಿಕ ರಾಜಕೀಯ ವಿಷಮತೆ ಕಂಡರೆ ನನಗೆ ತಡೆಯಲಾಗದ ಸಿಟ್ಟು! ನನ್ನ ಸಾಹಿತ್ಯ ಅಮರವಾದಿದ್ದರೂ ಸರಿಯೇ, ನನ್ನ ಸಾಹಿತ್ಯ ಚಿರಂಜೀವಿಯಾಗದಿದ್ದರೂ ಸರಿಯೇ ಬಾಳಿನ ಹೋರಾಟದಲ್ಲಿ ಕಾದು–ಸೋತು ಹೋಗಲಿರುವ ಬಡಬಾಂಧವರಿಗೆ ಅದು ಪ್ರಚೋದನೆ ನೀಡಿದರೆ ಸಾಕು" ಎಂಬ ಬದ್ಧತೆಯೊಂದಿಗೆ ಸಾಹಿತ್ಯ ರಚಿಸಿದವರು ಬಸವರಾಜ ಕಟ್ಟೀಮನಿಯವರು.



"ಪ್ರಗತಿಶೀಲ ಸಾಹಿತ್ಯ ಪಂಥದ ಅಗ್ರಗಣ್ಯ ಕಥೆಗಾರರಲ್ಲಿ ಕಟ್ಟೀಮನಿ ಪ್ರಮುಖರು. ಗಾಢವಾದ ಜೀವನಾನುಭವ; ತೀಕ್ಷ್ಣವಾದ ಅಂತಃಕರಣಪೂರ್ವಕವಾದ ಒಳನೋಟ; ಕೊಳೆತ ಸಂಪ್ರದಾಯಕ್ಕೆ ಸಲಾಮು ಹಾಕದ, ಹಳತನ್ನು ತ್ಯಜಿಸಿ ಹೊಸತನ್ನು ಸೃಜಿಸುವ, ಅವ್ಯವಸ್ಥೆಯನ್ನು ಅಳಿಸುವ, ಆವೇಶಪೂರ್ಣವಾದ ಆದರೆ ಪ್ರಾಮಾಣಿಕವಾದ ಸುಧಾರಣೆಯ ಧೀರ ಮನೋಭಾವ; ತೀವ್ರವಾದ ಸಮಕಾಲೀನ ಪ್ರಜ್ಞೆ ಇವೆಲ್ಲ ಕಟ್ಟೀಮನಿ ಕಥೆಗಳ ಮೂಲದ್ರವ್ಯ" ಎಂಬ ಎಚ್.ಜೆ.ಲಕ್ಕಪ್ಪಗೌಡರ ಈ ಅಭಿಪ್ರಾಯವನ್ನು ಕಟ್ಟೀಮನಿಯವರ ಒಟ್ಟಾರೆ ಸಾಹಿತ್ಯಕ್ಕೆ ಸಂಪೂರ್ಣವಾಗಿ ಅನ್ವರ್ಥವಾಗಿ

ಅನ್ವಯಿಸಬಹುದು. ಸಣ್ಣಕತೆಯಿಂದ ಆರಂಭವಾದ ಕಟ್ಟೀಮನಿಯವರ ಸಾಹಿತ್ಯಯಾತ್ರೆ ಕವನ, ಕಾದಂಬರಿ, ಪ್ರವಾಸಕಥನ, ನಾಟಕ, ಅನುವಾದ, ಜೀವನಚರಿತ್ರೆ, ಮಕ್ಕಳ ಸಾಹಿತ್ಯ, ಅಂಕಣಬರಹ, ಆತ್ಮಕಥೆ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ವಿಸ್ತರಿಸಿ 64 ಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿವಂತೆ ಮಾಡಿದ್ದು ಸಾಹಿತ್ಯದ ಕೌತುಕವೇ ಸರಿ. ಉತ್ತರ ಕರ್ನಾಟಕದ ಗ್ರಾಮೀಣ ಪರಿಸರದ ಸರಳ ಗಂಡುಭಾಷಾಶೈಲಿಯಲ್ಲಿ ರಚಿತವಾದ ಇವರ ಸಾಹಿತ್ಯ ರಚನೆ ನೊಂದವರ ಪರವಾಗಿ ಶೋಷಿತರ ವಿರುದ್ಧವಾಗಿ ಬಿರುಗಾಳಿಯಂತೆ ಅಬ್ಬರಿಸಿ, ಬೆಂಕಿಯುಂಡೆಯಂತೆ ಅಪ್ಪಳಿಸಿ ಶೋಷಿತರೆಡೆಗೆ ತನ್ನ ಉರಿಯನಾಲಗೆಯನ್ನು ಚಾಚುತ್ತವೆ.

**'ಕಾದಂಬರಿಕಾರನ ಕಥೆ'–** ಕಟ್ಟೀಮನಿಯವರ ಬದುಕಿನ ನಿತ್ಯಸತ್ಯಗಳನ್ನು ಕಂಡರಿಸಿದ ಅವರ ಆತ್ಮಕಥೆ. ಬದುಕಿನಲ್ಲಿ ತಾನುಂಡ ಬವಣೆಯ ಓರೆಕೋರೆಗಳನ್ನು ತೋರಿಕೆ ತೋರದೆ ತೆರೆದಿಟ್ಟ ಪುಸ್ತಕ. ವಾಸ್ತವತೆಗೆ ಪಂಚೇಂದ್ರಿಯಗಳನ್ನು ತೆರೆದಿಟ್ಟು ಆದರ್ಶಜೀವನವನ್ನು ತನ್ನದಾಗಿಸಬೇಕೆಂಬ ಹಟತೊಟ್ಟು ದಿಟ್ಟತನದಿಂದ ಬದುಕಿದ ಅವರ ಜೀವನದರ್ಶನ ಈ ಕೃತಿಯ ಪ್ರತಿ ಪುಟದಲ್ಲಿಯೂ ಅಭಿವ್ಯಕ್ತಗೊಂಡಿದೆ. ಐದು ದಳಗಳಲ್ಲಿ 762 ಪುಟಗಳಲ್ಲಿ 476 ಸನ್ನಿವೇಶದ ಉಪಶೀರ್ಷಿಕೆಗಳಲ್ಲಿ ಬಿತ್ತರಗೊಂಡಿರುವ ಈ ಕೃತಿಯು ಅವರ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನದ ನಾನಾ ಆಯಾಮಗಳನ್ನು ಸ್ಪಷ್ಟವಾಗಿ ಪರಿಚಯಿಸುತ್ತದೆ.

ಇಡೀ ವಿಶ್ವವು ಪ್ರಥಮ ಮಹಾಯುದ್ಧದ ಭೀಕರತೆಯ ಬವಣೆಯಿಂದ ಬಸವಳಿಯುತ್ತಿದ್ದ ಸಂದರ್ಭ, ಆಗ ಇಡೀ ಗ್ರಾಮ ಗುದ್ದವ್ವನಬೇನೆ ( ಇನ್‌ಫ್ಲುಯೆಂಜಾ ) ಎಂಬ ಮದ್ದಿಲ್ಲದ ಸೋಂಕಿನ ಖಾಯಿಲೆಯಿಂದ ತತ್ತರಿಸುತ್ತಿತ್ತು. ಇಂತಹ ವಿಷಣ್ಣ ಪರಿಸ್ಥಿತಿಯಲ್ಲಿ ಉತ್ತರ ಕರ್ನಾಟಕದ ಬೆಳಗಾವಿ ಬಳಿಯ ಮಲಾಮರಡಿ ಎಂಬ ಕುಗ್ರಾಮದಲ್ಲಿ ಬಾಳವ್ವ ಮತ್ತು ಅಪ್ಪಯ್ಯರೆಂಬ ವೀರಶೈವ ದಂಪತಿಗಳ ಎರಡನೆಯ ಮಗನಾಗಿ ಬಸವರಾಜ ಕಟ್ಟೀಮನಿಯವರು ಜನಿಸಿದರು. ಈ ದಂಪತಿಗಳು ಶರಣತತ್ತ್ವ ನೆಲೆಯಲ್ಲಿ ಜೀವಿಸುತ್ತಾ, ತಮ್ಮ ಕುಲದೈವ ಎಡೂರಿನ ವೀರಭದ್ರನ ವರಪ್ರಸಾದದಿಂದ ಹುಟ್ಟಿದ ಚೊಚ್ಚಲ ಮಗನಿಗೆ ವೀರಣ್ಣ ಎಂದು ಕರೆದರೆ, ಎರಡನೆಯ ಮಗನಿಗೆ ತಮ್ಮ ಧಾರ್ಮಿಕಚಾರ್ಯನ ಪ್ರತೀಕವಾದ ಬಸವಣ್ಣ ಎಂಬ ಹೆಸರನ್ನು ಅನಾಯಾಸವಾಗಿ ಇರಿಸಿದರು. 1919 ಅಕ್ಟೋಬರ್ 5 ರಂದು ಜನಿಸಿದ ಈ ಹುಡುಗ, ಬಸಣ್ಣ, ಬಸಪ್ಪ, ಬಸವ ಎಂಬ ಪ್ರರ್ಯಾಯ ನಾಮಗಳಿಂದ ಕರೆಯಲ್ಪಡುತ್ತಿದ್ದ ಈ ಹುದುಗ ಬಸವರಾಜನಾದದ್ದು ಇಪ್ಪತ್ತು ವರ್ಷಗಳ ತರುವಾಯದಲ್ಲಿ. ( ಇದೇ ದಿನದಂದು ಕರ್ನಾಟಕದಲ್ಲಿ ಮತ್ತೊಬ್ಬ ಬಸವರಾಜ ಹುಟ್ಟಿ, ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಹಿರಿಯ ವಿದ್ವಾಂಸರಾಗಿ ಕಂಗೊಳಿಸಿ, ಎಲ್ ಬಿ ಎಂಬ ನಾಮಧೇಯದಿಂದ ಕನ್ನಡವಾಙ್ಮಯವನ್ನು ಶ್ರೀಮಂತಗೊಳಿಸಿದ್ದು ಕನ್ನಡಾಂಬೆಯ ಸುಕೃತವೇ ಸರಿ.) ಈ ಬಸಣ್ಣ ಪತ್ರಿಕೆಗೆ ಬರೆದ ಲೇಖನವನ್ನು ಮೆಚ್ಚಿದ ಸಂಪಾದಕನೊಬ್ಬ ಬಸಣ್ಣನೆಂಬ ಹೆಸರನ್ನು ತಿದ್ದಿ ಬಸವರಾಜುವನ್ನಾಗಿ ಮಾಡಿದ.

ತಂದೆಗೆ ಆಗಿನ ಬ್ರಿಟಿಷ್ ಸರ್ಕಾರದಲ್ಲಿ ಪೋಲಿಸ್ ನೌಕರಿ. ತುಂಡು ಭೂಮಿಯಿಲ್ಲದೆ ನಿಲ್ಲಲು ನೆಲೆಯಿಲ್ಲದೆ ಊರಿಂದ ಊರಿಗೆ ವಲಸೆ ಹೋಗುತ್ತಿದ್ದ ಬಡಕುಟುಂಬ. 'ನಾನಂತೂ ಸಾಲೀ ಕಲೀಲಿಲ್ಲ, ನಿಮ್ಮಪ್ಪನೂ ಕಲೀಲಿಲ್ಲ, ನನ್ನ ಮಕ್ಕಳು ನೀವಾದರೂ ಕಲೀರಪಾ, ಕಲಿತು ಶ್ಯಾಣಾರಾಗ್ರಿ' ಎಂಬ ತಾಯಿ ಬಾಳವ್ವನ ಹಂಬಲದಿಂದ ವಿದ್ಯಾಭ್ಯಾಸ ಮಲಾಮರಡಿಯಲ್ಲಿ ಪ್ರಾರಂಭವಾಗಿ, ಅನಂತರ ತಂದೆ ನೌಲರಿಯ ವರ್ಗಾವಣೆಗೆ ತಕ್ಕಂತೆ ಕಿತ್ತೂರು, ಬೈಲಹೊಂಗಲ, ಗೋಕಾಕ್... ಹೀಗೆ ಬದಲಾಗುತ್ತಾ ಹೋದವು. ಪ್ರಾಥಮಿಕ ಶಾಲೆಯ ಮೂರನೆಯ ತರಗತಿ ಓದಿತ್ತಿರಬೇಕಾದರೆ ಬಸಣ್ಣನ ಶ್ರವಣಶಕ್ತಿಗೆ ದೊಷವಿದೆ ಎಂದು ತಿಳಿಯುತ್ತದೆ. ಇದಕ್ಕೆ ಕಾರಣ, ತಾಯಿ ಈತನಿಗೆ ಗರ್ಭವತಿಯಾಗಿದ್ದಾಗ ಆಕೆಗೆ ಗುದ್ದವ್ವನ ಬೇನೆ ಬಂದಿದ್ದೆ ಎಂದು ವೈದ್ಯರು ನಿಶ್ಚಯಿಸುತ್ತಾರೆ. ಶ್ರವಣದೋಷದ ಕೊರತೆ ಒಮ್ಮೆಲೇ ಬಸಪ್ಪನಿಗೆ ಸಮಾಜದ ಇತರರಿಂದ ದೂರವಾಗುವಂತೆ ಮಾಡಿತು. ದೋಷವನ್ನು ಗುಣವಾಗಿ ಪರಿವರ್ತನೆ ಮಾಡಿಕೊಂಡ ಬಸಪ್ಪ, ತನ್ನ ಏಕಾಂತ ಶೂನ್ಯತೆಯನ್ನು ಪಠ್ಯಪುಸ್ತಕದ ಓದಿನೆಡೆಗೆ ತೀಕ್ಷ್ಣ ಗ್ರಹಿಕೆಯೆಡೆಗೆ ತಿರಿಗಿಸಿಕೊಂಡರು. ತಂದೆ ಅಪ್ಪಯ್ಯನಿಗೆ ಬ್ರಿಟಿಷ್ ಸರ್ಕಾರದಲ್ಲಿ ತಿಂಗಳಿಗೆ 12 ರೂಗಳ ಪಗಾರ ನಿಗದಿಯಾಗಿತ್ತು. ಆಗೊಮ್ಮೆ ಸರ್ಕಾರ ತನ್ನ ನೌಕರಿಗೆಲ್ಲ ಸಂಬಳ ಹೆಚ್ಚಿಸಿತು. ಅದರಂತೆ ಕಾರಕೂನ 12 ರೂಗಳ ಜೊತೆಗೆ 11 ರೂಗಳನ್ನು ಸೇರಿಸಿ 23 ರೂಗಳನ್ನು ಅಪ್ಪಯ್ಯನ ಕೈಗಿತ್ತ. ಮನೆಗೆ ಬಂದು ತನ್ನ ಪಗಾರವನ್ನು ನೋಡಿ ಗಲಿಬಿಗೊಂಡ ಅಪ್ಪಯ್ಯ ' ಕಾರಾಕೂನ ಏನೋ ಮರೆತು ಕೊಟ್ಟಾನೋ ಏನೋ? ಇದ್ದರೂ ಇರಬಹುದು, ಪಾಪ ಯಾವುದೋ ವಿಚಾರದಾಗ ಇದ್ದನೋ ಏನೋ? ಹನ್ನೊಂದು ರೂಪಾಯಿ ಹೆಚಾಗಿ ಕೊಟ್ಟಾ, ಸರಕಾರದ ರೊಕ್ಕ; ಇನ್ನ ಅವ ಕೈಯಿಂದ ತುಂಬಾ ಬೇಕಾಗ್ಯೆತಿ, ಅವಗೂ ಹೆಂಡತಿ ಮಕ್ಕಳದಾರ. ಅವರ ಶಾಪ ನಮಗ ಬಡದೀತಲ್ಲ? ನಮಗ್ಯಾಕ ಇಂಥಾ ಅನ್ಯಾಯದ ರೊಕ್ಕ?' ಇಂತಹ ಆದರ್ಶದ ಶಿಸ್ತಿನ ಪ್ರಾಮಾಣಿಕತನ ಮುಂದೆ ಬಸಪ್ಪನ ಬದುಕಿಗೆ ದಾರಿದೀಪವಾಯಿತು.

ಬಸಪ್ಪ ಏಳನೆಯ ತರಗತಿಯನ್ನು ಓದುತ್ತಿರಬೇಕಾದರೇನೇ ಹುಡುಗರ ಮೇಲೆ ಸರ್ವಾಧಿಕಾರ ನಡೆಸುವ ಮಾಸ್ತರಿಕೆಯ ಕೆಲಸದ ಕನಸು ಮನೆಮಾಡಿತ್ತು. ತಂದೆ ತಾಯಿಯ ಶಿಸ್ತು, ಪ್ರಾಮಾಣಿಕತೆ, ಕಟ್ಟುನಿಟ್ಟಿನ ಸ್ವಾಭಿಮಾನದ ಜೀವನ ಮಕ್ಕಳ ವ್ಯಕ್ತಿತ್ವದ ಕನ್ನಡಿಯಾಗಿತ್ತು. " ಒಂದೋ ಪುಸ್ತಕಾ ಓದುತ್ತಾ ಇರಬೇಕು, ಇಲ್ಲಾಂದರೆ, ಬೇರೇನಾದ್ರು ಕೆಲಸ ಮಾಡ್ತ ಇರಬೇಕು, ಬರೀ ತಿರಗೂದಕ್ಕ ಗಿರಗೂದಕ್ಕ ನೀವೇನೂ ಸಾವುಕಾರರ ಮಕ್ಕಳಲ್ಲ" ಎಂಬುದು ತಾಯಿಯ ಸ್ಪಷ್ಟವಾಗಿತ್ತು. ಇದರಿಂದಾಗಿ ಬಸಪ್ಪನಿಗೆ ಪುಸ್ತಕಪ್ರೀತಿ ಸಹಜವಾಗಿ ಬಂದು, ಬಾಲ್ಯದಲ್ಲಿಯೇ ಗಾಂಧೀಜಿ, ಪರಮಹಂಸ, ವಿವೇಕಾನಂದರ ಜೀವನ ಚರಿತ್ರೆಗಳು ಹಾಗೂ ರಾಮರಾಯರ ಸುಬೋಧ ಕುಸುಮಾಂಜಲಿ ಕೃತಿಗಳ ಪರಿಚಯವಾಯಿತು. ಓದುವ ಹವ್ಯಾಸ ಅನಾಯಾಸವಾಗಿಯೇ ಒಲಿದು ಬಂದಿತು. ಮಾಧ್ಯಮಿಕ ಶಾಲೆಯ ಗುರುಗಳಾದ ಕುಲಕರ್ಣಿ ಪ್ರಹ್ಲಾದರಾಯರು, ಶ್ರೀಕೃಷ್ಣ ಪಾಟೀಲರು ಹಾಗೂ ಕೇದನೂರು ಗುರುಗಳ

ಪ್ರೇರಣೆ ಪ್ರಭಾವಗಳಿಂದ ಬಸಪ್ಪನ ಮನ ಬರಹದೆಡೆಗೆ ಮುಖಮಾಡಿತು. ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಬಸಪ್ಪ 'ವಿದ್ಯಾರ್ಥಿ' ಎಂಬ ಹೆಸರಿನ ಕೈಬರಹದ ಪತ್ರಿಕೆಯನ್ನು ಹೊರತರುವ ಮೂಲಕ ಸಂಪಾದಕನಾಗಿ ಬರಹಗರನಾಗಿ ರೂಪುಗೊಂಡಿದ್ದ. ಯಾವುದೇ ಧರ್ಮದ ಹಂಗಿಲ್ಲದ ಬಸಪ್ಪ, ಜಾತಿಯಲ್ಲಿ ಲಿಂಗಯಿತನಾದರೂ ಯಾವ ಶಿವದಾರವನ್ನು ಕಟ್ಟಿರಲಿಲ್ಲ. " ನನ್ನಂತೆ ಲಿಂಗಾಯತ ರೈತರಲ್ಲಿ ಜನಿಸಿದವರಿಗೆ ಮಾತ್ರ ಜಾತಿಸೂಚಕ ಚಿಹ್ನೆ ಯಾವುದೂ ಇರಲಿಲ್ಲ. ಲಿಂಗದ ಸಂಪರ್ಕವಿರದಿದ್ದರೂ ನಾವು ಲಿಂಗಾಯಿತರೆಂದು ಕರೆಯಿಸಿಕೊಳ್ಳುತ್ತಿದ್ದೆವು" ಎಂಬುದು ಅವನ ವಾದವಾಗಿತ್ತು. ಹುಬ್ಬಳ್ಳಿಯ ಸಿದ್ಧರೂಢ ಸದ್ಗುರುವಿನ ಪ್ರಭಾವದಿಂದ ಆಧ್ಯಾತ್ಮದ ಭಕ್ತಿ ರುಚಿಯೆನಿದರೂ ಮನೆಯಲ್ಲಿ ಪೂಜೆಮಾಡಲಿಕ್ಕೂ ಸ್ಥಳವಿಲ್ಲದಿರುವಾಗ ಇಂತಹ ಧ್ಯಾನ ಪೂಜೆಗಳಿಂದ ಏನು ಉಪಯೋಗ ಎಂಬ ವಾಸ್ತವಾಂಶ ಬಸಪ್ಪನ ಅರಿವಿಗೆ ಬಂತು. ಮೊದಮೊದಲು ತನ್ನ ನೋಟ್ ಪುಸ್ತಕದಲ್ಲಿ ಕವಿತೆಗಳನ್ನು ಬರೆಯುವ ಮೂಲಕ ಸಾಹಿತ್ಯದ ಗೀಳು ಹತ್ತಿಸಿಕೊಂಡ ಬಸಪ್ಪ, ಅನಂತರ ಆನಂದಕಂದ, ಮಾಸ್ತಿಯವರ ಸಣ್ಣಕಥೆಗಳನ್ನು ಓದುವುದರ ಮೂಲಕ ಸಂಪೂರ್ಣ ಸಾಹಿತ್ಯಾಸಕ್ತರಾಗಿ ರೂಪುಗೊಂಡರು.

ಹೈಸ್ಕೂಲಿನಲ್ಲಿಯೇ ಬೆಳಗಾವಿ ವೆಂಕಟರಾವ್ ಸಂಪಾದಕತ್ವದ 'ಅರುಣೋದಯ' ಪತ್ರಿಕೆಯಲ್ಲಿ ಬಸಪ್ಪನ ಕವಿತೆಗಳು ಸಾಹಿತ್ಯಲೋಕಕ್ಕೆ ಪುಟ್ಟಹೆಜ್ಜೆಗಳನ್ನು ಇಡುತ್ತಾ ಪ್ರವೇಶಿದವು. ಸಾಹಿತ್ಯಾಭಿರುಚಿವುಳ್ಳ ಪಟ್ಟಣ್ಣಶೆಟ್ಟಿ ಎಂಬ ಮಾಸ್ತರರು 'ಪ್ರಬುದ್ಧ ಕರ್ನಾಟಕ' ಹಾಗೂ 'ಜಯಕರ್ನಾಟಕ' ಎಂಬ ಸಾಹಿತ್ಯ ಪತ್ರಿಕೆಗಳನ್ನು ಬಸಪ್ಪನಿಗೆ ಕೊಟ್ಟು ಓದಿಸುತ್ತಿದ್ದರು. ಇದರಿಂದ ಬಾಲ್ಯದಲ್ಲಿಯೇ ಬಸಪ್ಪನಿಗೆ ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ ಮೊದಲಾದ ಸಾಹಿತಿಗಳ ಪರಿಚಯವಾಯಿತು. ಮುಂದೆ ಶ್ರೀಕೃಷ್ಣ ಪಾಟೀಲರ ನಾಯಕತ್ವದ 'ನಾಡನರಿಗಳ ಸಂಘ' ಎಂಬ ಕನ್ನಡಕೂಟದ ಗ್ರಂಥಾಲಯದಲ್ಲಿ ಕಾರ್ಯಕರ್ತನಾಗಿ ನಾಲ್ಕು ರೂಪಾಯಿ ಸಂಬಳದ ಕೆಲಸ ಬಸಪ್ಪನಿಗೆ ದೊರಕಿತು. ಕುರಿಕಾಯೋ ತೋಳ ಎಂದರೆ ಸಂಬಳವೇ ಬೇಡ ಎಂಬಂತಾದ ಬಸಪ್ಪ ತನಗೆ ಸಿಕ್ಕ ಈ ಅವಕಾಶದಿಂದ ಗ್ರಂಥಾಲಯದಲ್ಲಿದ್ದ ಬಹುತೇಕ ಕನ್ನಡ ಪುಸ್ತಕಗಳನ್ನು ಓದಿ ಮುಗಿಸಿದರು. " ಈ ಕಥೀ ಓದಿದರ ಕೇಳಿದರ ಏನ ಬರತೈತೋ! ನಿದ್ದೆ ಹಾಳು! ಎಣ್ಣೆ ಹಾಳು" ಎಂಬ ಅಪ್ಪನ ಗೊಣಗಾಟದಿಂದ ಗ್ರಂಥಾಲಯದ ಈ ಕಾರ್ಯಕರ್ತನ ಹುದ್ದೆಯನ್ನು ತ್ಯಜಿಸಿ, ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಹಾಯಕನಾಗಿ ಕೆಲಸ ಮಾಡತೊಡಗಿದರು.

ಮುಂದೆ 'ತರುಣ ಕರ್ನಾಟಕ' ಪತ್ರಿಕೆಯ ಉಪಸಂಪಾಕರಾದರು. ಈ ಪತ್ರಿಕೆಗಳ ಸಹವಾಸದಿಂದ ದಿವಾಕರ ರಂಗರಾಯ ಹರ್ಡೇಕರ್ ಮಂಜಪ್ಪನಂತಹ ದೇಶಭಕ್ತರ ಸಖ್ಯವಾಯಿತು. ಇವರುಗಳ ದೇಶಭಕ್ತಿಯ ಪ್ರೇರಣೆಯ ಮಾತುಗಳಿಂದ ದೇಶಭಕ್ತಿಯ ಕಿಚ್ಚು ಹೆಚ್ಚಾಗಿ ಆವರಿಸಿತು. 1942 ರ ಚಲೇಜಾವ್ ಚಳವಳಿಯಲ್ಲಿ ಬಸಪ್ಪ ಸ್ವತಃ ಧುಮುಕಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮುಂಗೈ ಗಾಯ ಮಾಡಿಕೊಂಡು ರಕ್ತತಿಲಕವನ್ನು ಹಣೆಗಚ್ಚಿಗೊಂಡು 'ಇಂಕ್ವಿಲಾಬ್ ಜಿಂದಾಬಾದ್' ಎಂದು ಘೋಷಣಾವಾಕ್ಯ ಕೂಗುತ್ತ ಸ್ವಾತಂತ್ರ ಚಳವಳಿಯ ಹೋರಾಟಗಾರರಾದರು. ಆಗಸ್ಟ್ ತಿಂಗಳ ಚಳವಳಿಯಲ್ಲಿ ನೇರವಾಗಿ ಧುಮುಕಿ ಬ್ರಿಟಿಷ್ ಸರ್ಕರದ ದಬ್ಬಾಳಿಕೆ, ಗೋಲಿಬಾರ್, ಅತ್ಯಾಚಾರ ದಮನನೀತಿಗಳನ್ನು ಖಂಡಿಸಿ ಭಾಷಣಮಾಡಿ ಹೋರಾಟಮಾಡಿದರ ಫಲಿತವಾಗಿ ಹಿಂಡಲಗಿ ಸೆರೆಮನೆಯ ಅತಿಥಿಗಳಾದರು. ಸೆರೆಮನೆಯಲ್ಲಿದ್ದ ಮಿತ್ರರ ಬಳಿಯಿದ್ದ ಸಮಾಜವಾದ, ಸಾಮ್ಯವಾದ, ಮಾರ್ಕ್ಸವಾದ, ಗಾಂಧೀವಾದದ ಪುಸ್ತಕಗಳನ್ನು ಓದಿ ಅರಗಿಸಿಕೊಂಡು ಮೈಮನಗಳನ್ನು ಗಟ್ಟಿಮಾಡಿಕೊಂಡರು.

ಅನಂತರ ಬೆಂಗಳೂರಿಗೆ ಪಯಣ ಬೆಳೆಸಿ ಆ ಕಾಲದಲ್ಲಿ ಜನಪ್ರಿಯವಾಗಿದ್ದ ಬಿ.ಎನ್.ಗುಪ್ತ ಅವರ ಸಂಪಾದಕತ್ವದ 'ಸಮಾಜ' ಪತ್ರಿಕೆಯ ಸಂಪಾದಕರಾದರು. ಮುಂದೆ 'ಕರ್ನಾಟಕ ಬಂಧು' ಪತ್ರಿಕೆಯ ಸಂಪಾದಕರಾಗಿ ಅಲ್ಲಿಂದ 'ಲೋಕಮತ' ಪತ್ರಿಕೆಗೆ ಬಂದರು. ಸಂಪಾದಕತ್ವದ ಬಿಡುವಿನ ವೇಳೆಯಲ್ಲಿ ಬಸಪ್ಪ ತಮ್ಮ ಸಾಹಿತ್ಯ ರಚನೆಗೆ ತೊಡಗಿದರು. 'ಕಾರವಾನ್' ಕಥೆಯ ಮೂಲಕ ಸಾಹಿತ್ಯ ಪ್ರವೇಶಿಸಿದ ಅವರು, ಮುಂದೆ 'ಜೀನವಕಲೆ' ಮತ್ತು 'ಗುಲಾಬಿ ಹೂ ಕಥೆಗಳನ್ನು ಬರೆದು ಎನ್ಕೆಯವರ ಸಂಪಾದಕತ್ವದ 'ವಸಂತ' ಮಾಸ ಪತ್ರಿಕೆಯಲ್ಲಿ ಪ್ರಕಟಿಸಿದರು. ಅನಕೃ, ರಂ.ಶ್ರೀ.ಮುಗಳಿಯವರ ಆತ್ಮೀಯತೆ, ಮಾಸ್ತಿ, ಬೇಂದ್ರೆಯವರ ಮೆಚ್ಚುನುಡಿಗಳು ಇವರ ಸಾಹಿತ್ಯ ರಚನೆಗೆ ನೀರೆರೆದವು. ಸೆರೆಮನೆಯಲ್ಲಿ ನೂರಾರು ಜನರ ನಿಕಟತೆ ಬೆಳೆದು ಜ್ಞಾನವ್ಯಾಪ್ತಿ ವಿಶಾಲತೆ ಪಡೆದು ವೈವಿಧ್ಯಮಯ ಅನುಭವಚಿತ್ರಗಳ ದರ್ಶನ ಪಡೆದುಕೊಂಡಿದ್ದ ಬಸಪ್ಪ ಅದನ್ನು ತಮ್ಮ ಸಾಹಿತ್ಯ ರಚನೆಗೆ ಬಂಡವಾಳ ಮಾಡಿಕೊಂಡರು.

ಅವರೇ ಹೇಳುವಂತೆ 'ಮಾನವ ಸ್ವಭಾವದ ನೂರಾರು ವೈವಿಧ್ಯಮಯ ಮಾದರಿಗಳ ವೈಚಿತ್ರ್ಯಗಳ ಅನುಭವ ಬಂದಿದ್ದು ಸೆರೆಮನೆಯಲ್ಲಿಯೇ. ಅನಂತರ ನಾನು ಕಥೆ, ಕಾದಂಬರಿ ಬರೆಯಲು ಈ ಅನುಭವಗಳು ತುಂಬ ಉಪಯುಕ್ತವೆನಿಸಿದವು'. ಈ ಅನುಭವದ ಮೂಸೆಯಿಂದಲೇ ಬಸಪ್ಪನವರು 'ಕಾರವನ್', ' 'ಅವನು ಕೊನೆಯುಸಿರು ಹಾಕಿದ ಬಳಿಕ', 'ಜೀವನ ಕಲೆ', 'ಎರಡು ಗುಲಾಬಿ', 'ರೂಪದ್ವೇಷಿ', 'ಪರಾಜಿತೆ', 'ಮನಸಿನ ಮಂಜು, 'ಹೊಸ ಹುಟ್ಟು', 'ಬರದ ದೇವಿ', ಹಾಗೂ 'ಜೊತೆಗಾತಿ' ಎಂಬ ಕಥೆಗಳು ರೂಪಪಡೆದರೆ, 'ಆಗಸ್ಟ್ ಒಂಭತ್ತು' 'ಸ್ವಾತಂತ್ರದೆಡೆಗೆ' ಹಾಗೂ 'ಮಾಡಿ ಮಡಿದವರು' ಕಾದಂಬರಿಗಳಿಗೆ ವಸ್ತು ದೊರಕಿತು. ಅಲ್ಲಿಂದ ಮುಂದಕ್ಕೆ ಬಸಪ್ಪ, ಪೂರ್ಣಪ್ರಮಾಣದ ಬರಹಗಾರರಾಗಿ ರೂಪುತಳೆದು ಬಸವರಾಜ ಕಟ್ಟೀಮನಿಯಾದರು.

'ನನಗೆ ವ್ಯವಹಾರ ಬುದ್ಧಿ ಶೂನ್ಯ. ಆತ್ಮಸಾಕ್ಷಿಗೆ ಸರಿ ಎನಿಸಿದುದ್ದನ್ನು ಯಾರ ದಾಕ್ಷಿಣ್ಯವನ್ನು ನೋಡದೆ ಬರೆದು ಬಿಡುವುದು ಲೇಖಕನ ಕರ್ತವ್ಯವೆಂಬ ನಂಬಿಕೆ ನನ್ನದು. ಅದರಿಂದಾಗಿ ನನ್ನ ಬರವಣಿಗೆ ಎಂದಿನಿಂದಲೂ ಉಗ್ರವೆನಿಸಿಕೊಂಡಿದೆ; ಭಯಂಕರವೆನಿಸಿಕೊಂಡಿದೆ; ವಿಧ್ವಂಸಕವೆನಿಸಿಕೊಂಡಿದೆ. ಧರ್ಮವೆಂಬುದು ಬಡಜನರಿಗೆ ಅಮಲೇರಿಸುವ ಅಫೀಮು ಇದ್ದಂತೆ. ಜಾತಿ–ಮತ–ಧರ್ಮಗಳನ್ನು ಅಪ್ಪಿಕೊಂಡು ಹೊರಡುವ ಎಲ್ಲ ಸಂಸ್ಥೆಗಳು ನನಗೆ ತ್ಯಾಜ್ಯ. ಆಗಲೂ ಹಾಗೆಯೇ, ಈಗಲೂ ಹಾಗೆಯೇ.

ವೀರಶೈವ ಮಹಾಸಭೆ, ಹಿಂದೂ ಮಹಾಸಭೆ, ಬ್ರಾಹ್ಮಣ ಮಹಾಸಭೆ, ಇತ್ಯಾದಿ ಎಲ್ಲ ಮತೀಯ ಸಭೆಗಳ ಬಗೆಗೂ ನನಗೆ ತಿರಸ್ಕಾರ. ಮಾನವ ಕುಲವೆಲ್ಲ ಒಂದೇ; ಮತೀಯವಾದ ಭೇದ ಭಾವನೆಗಳೆಲ್ಲವೂ ಸ್ವಾರ್ಥಿಗಳಿಂದ ನಿರ್ಮಾಣವಾದವುಗಳು. ಈ ಸತ್ಯವನ್ನು ಜನರಿಗೆ ತಿಳಿಸಿ, ಮಾನವತೆಯ ಧ್ವಜ ಎತ್ತಿ ಹಿಡಿಯುವುದೇ ಪ್ರಗತಿಶೀಲ ಲೇಖಕರ ಆದ್ಯಕರ್ತವ್ಯ' ಎಂಬುದನ್ನು ತಮ್ಮ ಬದುಕು ಬರಹದಲ್ಲಿ ರೂಢಿಸಿಕೊಂಡವರು ಕಟ್ಟೀಮನಿಯವರು.

ಈ ಮಧ್ಯೆ 1944 ರಲ್ಲಿ ತಮ್ಮ ಮಿತ್ರ ನಂಜುಂಡನೆಂಬುವನ ತಂಗಿಯನ್ನು ಬಸವಜಯಂತಿಯಂದು ಸರಳವಾಗಿ ವಿವಾಹವಾದರು. ಮದುವೆಯಾದ ನಂತರ ತಮ್ಮ ಮಡದಿಗೆ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ ಎಂದು ತಿಳಿದು ಬೇಸೆತ್ತರು. ಆದರೂ ಆಕೆಯ ಗುಣ ಎರಡು ಗಂಡು, ಮೂರು ಹೆಣ್ಣು. ಸಂಸಾರ ಸಾಗರದಲ್ಲಿ ಮೀಯುತ್ತಾ ಕಟ್ಟೀಮನಿ ಸಾಹಿತ್ಯಕ್ಷೇತ್ರದಲ್ಲಿ ಮೇಲೇರುತ್ತಾ ಹೋದರು. ರಾಷ್ಟ್ರಕವಿ ಕುವೆಂಪು, ಬೇಂದ್ರೆ, ಅಡಿಗ, ಅನಕೃ, ತರಾಸು ಮೊದಲಾದವರ ಸಹಯೋಗದಿಂದ ಕಟ್ಟೀಮನಿಯವರ ಬರಹ ಮತ್ತಷ್ಟು ಬಿರುಸಾಯಿತು. ಸಣ್ಣಕಥೆ ಕ್ಷೇತ್ರದಿಂದ ಕಟ್ಟೀಮನಿ ಏಕಾಏಕಿ ಕಾದಂಬರಿ ಕ್ಷೇತ್ರಕ್ಕೆ ಧುಮುಕಿದರು. ಅವರೇ ಹೇಳುವಂತೆ ' ತರಾಸು ಮತ್ತು ನಾನು ಕಾದಂಬರಿಗಳಿಗೆ ಅಂಟಿಕೊಂಡಿದ್ದು 1950 ರ ನಂತರ. ನಾವಿಬ್ಬರೂ ಆರಂಭಿಸಿದ್ದು ಪತ್ರಕರ್ತರಾಗಿಯೇ. ಅದು ಬೇಸರವಾದ ಮೇಲೆ ನಾವು ಕಾದಂಬರಿಕಾರರಾದದ್ದು'. ಕಟ್ಟೀಮನಿ ಅವರ **'ಸ್ವಾತಂತ್ರದೆಡೆಗೆ'** ಕಾದಂಬರಿ ಪ್ರಕಟವಾದಾಗ ಅವರಿಗೆ 27 ವರ್ಷ ವಯಸ್ಸು; ಬರವಣಿಗೆ ಬಾಲಿಶವಾಗಿದ್ದರೂ ಕಾದಂಬರಿ ಕ್ಷೇತ್ರದಲ್ಲಿ ಒಳ್ಳೆಯ ಸ್ವಾಗತವೇ ದೊರಕಿತು. ಕವಿ ಕುವೆಂಪು ಅವರು ನಿಮಗೆ ಸಾಹಿತ್ಯದಲ್ಲಿ ಉಜ್ವಲ ಭವಿಷ್ಯವಿದೆ ಎಂದು ನುಡಿದ ಭವಿಷ್ಯವಾಣಿ ಹಾಗೂ ಹಲವಾರು ಸಾಹಿತಿಗಳ ಪ್ರೋತ್ಸಾಹದಾಯಕ ನುಡಿಗಳು ಬಸವರಾಜು ಅವರನ್ನು ಪ್ರಗತಿಶೀಲ ಪಂಥದ ಪ್ರಮುಖ ಕಾದಂಬರಿಕಾರನ್ನಾಗಿ ರೂಪಿಸಿತು. **'ಮಾಡಿ ಮಡಿದವರು', 'ಜ್ವಾಲಾಮುಖಿಯ ಮೇಲೆ', 'ಮೋಹದ ಬಲೆಯಲ್ಲಿ', 'ಜರಾತಾರಿ ಜಗದ್ಗುರು','ಬೀದಿಯಲ್ಲಿ ಬಿದ್ದವಳು', 'ಮಣ್ಣು ಮತ್ತು ಹೆಣ್ಣು',' ಖಾನಾವಳಿಯ ನೀಲಾ','ಬಲೆಯ ಬೀಸಿದರು', 'ನಾನು ಪೋಲಿಸನಾಗಿದ್ದೆ', 'ನೀ ನನ್ನ ಮುಟ್ಟಬೇಡ', 'ಬಂಗಾರದ ಜಿಂಕೆಯ ಹಿಂದೆ', 'ಜನಿವಾರ ಮತ್ತು ಶಿವದಾರ', 'ನರಗುಂದ ಬಂಡಾಯ', ಕಫನಿ ಮತ್ತು** ಸೀರೆ'– ಹೀಗೆ ಒಂದರ ಹಿಂದೆ ಒಂದು ಕಾದಂಬರಿಗಳು ಕಟ್ಟೀಮನಿಯವರ ಲೇಖನಿಯಿಂದ ಹರಿದುಬಂದವು. ಸಮಾಜದ ಹುಳುಕುಗಳು, ಗಣ್ಯವ್ಯಕ್ತಿಗಳ ಆಷಾಢಭೂತಿದ ನಾಟಕದ ಮಾತುಗಳು–ದೌರ್ಬಲ್ಯಗಳು, ಮಠಾಧೀಶ್ವರರ ಕಾಮಿತನ, ಶ್ರೀಮಂತರ ಅಟ್ಟಹಾಸ, ಬಹುಸಂಖ್ಯಾತ ಬಡಜನರ ಜೀವನದ ನೋವು ಸಂಕಟಗಳು ಕಟ್ಟೀಮನಿಯವರ ಕಾದಂಬರಿಗಳ ಮೂಲವಸ್ತುಗಳಾದವು. ಪ್ರಗತಿಶೀಲ ಸಾಹಿತ್ಯ ಎಂದರೇನು? ಎಂಬ ಪ್ರಶ್ನೆಗೆ ಅವರ **'ಜ್ವಾಲಾಮುಖಿಯ ಮೇಲೆ'** ಕಾದಂಬರಿ ಸ್ಪಷ್ಟ ಉದಾಹರಣೆಯಾಗಿದೆ. ಇವರ ಈ ಕಾದಂರಿಗೆ 1968 ರಲ್ಲಿ ಸೋವಿಯತ್ ರಾಷ್ಟ್ರದ ಪ್ರತಿಷ್ಠಿತ **ಜವಹರಲಾಲ್ ನೆಹರು ಪ್ರಶಸ್ತಿ** ಲಭಿಸಿದೆ.

ಗೋಪಾಲಕೃಷ್ಣ ಅಡಿಗರು ಕಟ್ಟೀಮನಿಯವರಿಗೆ ಬರೆದ ಪತ್ರದಲ್ಲಿ ' ನೀವು ಮಾಸಪ್ರತಿಕೆ ನಡೇಸದೆ ಇದ್ದರೂ ಚಿಂತೆಯಿಲ್ಲ. ಯಾವುದೇ ಹಳ್ಳಿಯಲ್ಲಿ ಅಜ್ಞಾತವಾಸ ನಡೆಸುತ್ತಿದ್ದರೂ ಅಡ್ಡಿಯಿಲ್ಲ. ಇಂಥ ಕಾದಂಬರಿಗಳನ್ನು ಮಾತ್ರ ಬರೆಯುತ್ತಾ ಹೋಗಿ' ನನಗೆ ಕಟ್ಟೀಮನಿ ಅಂದರೆ 'ಸರಿ–ಶುದ್ಧವಾದ ಮನಸ್ಸು, ಮಗುವಿನ ನಿಷ್ಕಲಂಕ ವರ್ತನೆ, ನ್ಯಾಯದ ಹಟ, ಸತ್ಯದ ಛಲ–ಕೆಲವು ಸರಿಯಲ್ಲವೋ ಎನಿಸಿದರೂ ಉದಾರವಾದ ಭಾವೋದ್ವೇಗ–ಈ ಚಿತ್ರ ಕಣ್ಣಮುಂದೆ ಬರುತ್ತದೆ'– ಎಂಬ ಅಡಿಗರ ಈ ಮಾತುಗಳು ಮಟ್ಟೀಮನಿಯವರ ಕಾದಂಬರಿಗಳ ಸತ್ವ ಮತ್ತು ಅವರ ವ್ಯಕ್ತಿತ್ವವನ್ನು ಹಿಡಿದಿಡುತ್ತದೆ. ತಮ್ಮ ಸಾಹಿತ್ಯ ರಚನೆಯ ಬಗ್ಗೆ ಮಟ್ಟೀಮನಿಯವರು ಹೇಳುವುದು ಹೀಗೆ – **"**ಓದುತ್ತಾ ಓದುತ್ತಾ ಬಂದಂತೆ, ಬರೆಯುತ್ತ ಬರೆಯುತ್ತ ಬಂದಂತೆ ಕೈಪಳಗುತ್ತದೆ. ಕಥನ ಕಲೆಯ ಹಲವಾರು ಗುಟ್ಟುಗಳು ತಂತ್ರಗಳು ತಿಳಿಯುತ್ತವೆ. ನಾನು ಬಾಲ್ಯದಿಂದಲೂ ಅಲೆಮಾರಿಯಂತೆ ನೂರು ಊರು ಸುತ್ತಿದವನು. ನನ್ನ ಜೀವನವೇ ಒಂದು ಕಾರಾವಾನ್. ಇಂದು ಇಲ್ಲಿ ನಾಳೆ ಅಲ್ಲಿ, ಸಾಗಿದೆ ಕಾರವಾನ್ ಎಂಬಂತೆ! ಯಾವ ಊರಿನ ಬಗ್ಗೆಗೂ ಮೋಹವಿಲ್ಲ. ಅದನ್ನು ಬಿಟ್ಟು ಹೊರಡುವಾಗ ವ್ಯಸನವಿಲ್ಲ. ಸ್ವಾತಂತ್ರ ಸಮರ, ಕಾರ್ಮಿಕರ, ರೈತರ ಚಳುವಳಿಯಲ್ಲಿ ಭಾಗವಹಿಸಿದ್ದೆ. ರಾಜಕೀಯ ಕ್ಷೇತ್ರದಲ್ಲೂ ಇದ್ದೆ. ಕರ್ನಾಟಕದ ಎಲ್ಲ ನಾಯಕರನ್ನು ಚೆನ್ನಾಗಿ ಬಲ್ಲೆ. ಹೀಗೆ ವಿವಿದ ರಂಗಗಳ ನಿಕಟ ಪರಿಚಯದಿಂದಾಗಿ ಸಾವಿರಾರು ವ್ಯಕ್ತಿಗಳನ್ನೂ ಅವರ ವಿಶೇಷಗಳನ್ನೂ ಅವರ ಓರೆಕೋರೆಗಳನ್ನೂ ಅವರ ಕಥೆಗಳನ್ನೂ ತಿಳಿದುಕೊಂಡೆ. ಕಥೆ ಕಾದಂಬರಿ ಬರೆಯುವವರಿಗೆ ಇಂಥ ವಿಶಾಲ ಅನುಭವ ತುಂಬಾ ಉಪಯುಕ್ತ. ಕಾದಂಬರಿ ಕನ್ನಡಿ ಇದ್ದಂತೆ; ಅದರಲ್ಲಿ ಕಾಣಿಸುವುದೆಲ್ಲವೂ ಸತ್ಯವೇ. ಅದನ್ನು ನಿರ್ಭಯದಿಂದ ಚಿತ್ರಿಸುವುದೇ ಕಾದಂಬರಿಕರನ ಕರ್ತವ್ಯ**"**.

ಕಾದಂಬರಿಗಳನ್ನು ರಚಿಸುವುದೇ ತಮ್ಮ ಜೀವನದ ಧ್ಯೇಯವೆಂಬಂತೆ ಸಾಹಿತ್ಯ ರಚನೆಗೆ ಮುಂದಾದ ಕಟ್ಟೀಮನಿಯವರು ತಾವು ಬರೆದ ಕಾದಂಬರಿಗಳ ಗೌರವಧನದಿಂದ 1965 ರಲ್ಲಿ ಧಾರವಾಡದ ಸಾಧನಕೇರಿಯ ಕೆಲಗೇರಿ ರಸ್ತೆಯ ಬಳಿ ಪುಟ್ಟ ಮನೆಯೊಂದನ್ನು ಕಟ್ಟಿಸಿದರು. ಕಾದಂಬರಿಗಳ ರಚನೆಯ ಗಳಿಕೆಯಿಂದ ಕಟ್ಟಿದ ಮನೆಯಾದ್ದರಿಂದ ಆ ಮನೆಗೆ **'ಕಾದಂಬರಿ'** ಎಂದೇ ಹೆಸರಿತ್ತರು. ಮುಂದೆ ಈ ಮನೆಯನ್ನು ಮಾರಿ, ಧಾರಾವಾಡದ ನವೋದಯ ನಗರದಲ್ಲಿ **'ಸಾಹಿತ್ಯಶ್ರೀ'** ಎಂಬ ಮನೆ ನಿರ್ಮಾಣಮಾಡಿದರು. ಈ ಮಧ್ಯೆ ಕಟ್ಟೀಮನಿ ಕೆಲವು ರಾಜಕೀಯ ನಾಯಕರ ಸಹಯೋಗ ಮತ್ತು ಸಹವಾಸದಿಂದ ರಾಜಕೀಯ ಕ್ಷೇತ್ರಕ್ಕೂ ಪ್ರವೇಶ ಮಾಡಲು ನಿಶ್ಚಯಿಸುತ್ತಾರೆ. 1962 ರಲ್ಲಿ ಗೋಕಾಕ್ ಕ್ಷೇತ್ರದಿಂದ ಕಾಂಗ್ರೆಸ್ ನ ಹುರಿಯಾಳಾಗಿ ನಿಲ್ಲಬೇಕೆಂಬುದು ಹಲವು ನಾಯಕರ ಹಂಬಲವಾಗಿರುತ್ತದೆ. ಅದರಂತೆ ವಿಧಾನಸಭೆಯ ಆಕಾಂಕ್ಷಿಯಾಗಲು ಕಟ್ಟೀಮನಿಯವರು ಯತ್ನಸಿದಾಗ ಕೆಲವು ರಾಜಕೀಯ ನಾಯಕರ ಮತ್ಸರದಿಂದ ಕಾಂಗ್ರೆಸ್ ಪಕ್ಷದ ಟಿಕೆಟು ಕೈತಪ್ಪುತ್ತದೆ. ಕೆಲವು ಸಾಹಿತಿಗಳು ಈ ರಾಜಕೀಯದ ಹುಚ್ಚು ನಿಮಗ್ಯಾಕೆ? ಮಣ್ಣು ಹೆಣ್ಣುದಂಥ ಇನ್ನು ಹತ್ತಿಪ್ಪತ್ತು ಕಾದಂಬರಿಗಳನ್ನು ಬರೆಯಿರಿ ಓದಿ ಸಂತೋಷ ಪಟ್ಟುಕೊಳ್ತೇವೆ ಎಂತಲೂ

ಕಿವಿಮಾತು ಹೇಳುತ್ತಾರೆ. ಈ ರಾಜಕೀಯ ಪ್ರವೇಶ ಕಟ್ಟೀಮನಿಯವರಿಗೆ ಅಸ್ತಿತ್ವದ ಪ್ರಶ್ನೆಯಾಗಿ ಕಂಡರಿಸಲ್ಲದೆ, ಅಂತರಂಗದ ವೇದನೆಯಾಗದೆ ಬಹಿರ್ಮುಖದ ಶೋಧನೆಯಾಗುತ್ತದೆ. ಇದರ ಪ್ರಯತ್ನದ ಫಲವಾಗಿ 1968 ಮೇ 13 ರಲ್ಲಿ ಕಟ್ಟೀಮನಿಯವರು ಕಾಂಗ್ರೆಸ್ ಪಕ್ಷದಿಂದ ವಿಧಾನಪರಿಷತ್ತಿನ ಸದಸ್ಯರಾಗಿ ನೇಮಕಗೊಳ್ಳುತ್ತಾರೆ.

ಈ ಸಂದರ್ಭದಲ್ಲಿ ಕಟ್ಟೀಮನಿಯವರಿಗೆ ಹಲವಾರು ರಾಜ್ಯನಾಯಕರ ಪರಿಚಯದ ಜೊತೆಗೆ ಇಡೀ ರಾಜ್ಯದ ಜನಜೀವನದ ದರ್ಶನವಾಗುತ್ತದೆ. ಬೆಂಗಳೂರಿನ ಜನಜೀವನ ಬಡತನದಿಂದ ಬದುಕು ಕಟ್ಟಿಕೊಂಡ ಕಟ್ಟೀಮನಿಯವರಿಗೆ ಕೌತುಕವೆನಿಸುತ್ತದೆ. ಇದನ್ನು ನೋಡಿ ಅವರು ಹೇಳುವುದು ಹೀಗೆ-" ಕೂಳನು ಹೆಮ್ಮೆಗೆ ಬಿಸುಡುವರಿಲ್ಲಿ, ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ, ಇಲ್ಲಿ ಬೆಂಗಳೂರಿನಂತಹ ನಗರದಲ್ಲಿ ಪಂಚಭಕ್ಷ್ಯಗಳಿಗೆ ಕೊರತೆ ಇಲ್ಲ. ಆದರೆ ಹಳ್ಳಿಗಳಲ್ಲಿ ಮಾತ್ರ ತಿನ್ನುವುದಕ್ಕೆ ಜನರಿಗೆ ರಾಗಿ ರೊಟ್ಟಿ ಕೂಡ ಸಿಗುವುದಿಲ್ಲ". ಇದರಿಂದ ಜನಸ್ಥಿತಿ ಅರಿತು ಹಲವಾರು ಜನಪರ ಕಾರ್ಯ ಮಾಡಿದರು. ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವ ಸಂದರ್ಭದಲ್ಲಿ, ದೇವರಾಜ ಅರಸು ಅವರ ಸರ್ಕಾರ ಭೂಸುಧಾರಣಾ ನೀತಿಯನ್ನು ಜಾರಿಗೆ ತರುವಲ್ಲಿ ಕಟ್ಟೀಮನಿಯವರ ಪಾತ್ರ ಅವಿಸ್ಮರಣೀಯವಾದುದು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರತ್ಯೇಕ ಕನ್ನಡ ಅಧ್ಯಯನ ಪೀಠ ಸ್ಥಾಪಿಸುವಲ್ಲಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕನ್ನಡ ಪ್ರಾಧ್ಯಾಪಕರಾದ ದೇ.ಜವರೇಗೌಡರನ್ನು ನೇಮಕಮಾಡುವಲ್ಲಿ, ಆ ಮೂಲಕ ನಾಡಿನಾಂದತ್ಯ ಕನ್ನಡಪರ ಚಟುವಟಿಕೆಗಳು ನಡೆಯುವಲ್ಲಿ ಪರೋಕ್ಷವಾಗಿ ಕಟ್ಟೀಮನಿ ಕಾರಣೀಭೂತರಾದರು. **" ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ! ಬೆಲ್ಲ ಸಕ್ಕರೆಯಾಗು, ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ"** ಎಂಬ ಕಗ್ಗದ ವಾಣಿಯಂತೆ ತಮ್ಮ ರಾಜಕೀಯ ಜೀವನದ ಅಧಿಕಾರದ ಅವಧಿಯಲ್ಲಿ ಕಟ್ಟೀಮನಿ ಹಲವು ಜನಪರ ಕೆಲಸಗಳನ್ನು ಮಾಡಿದರು. ಮುಂದೆ ಕಾಂಗ್ರೆಸ್ ಪಕ್ಷದ ಒಡಕಿನಿಂದಾಗಿ ಹಲವಾರು ಚಾಡಿಕೋರರ, ಭ್ರಷ್ಟ, ಅಪ್ರಾಮಾಣಿಕ ರಾಜಕಾರಣಿಗಳ ಕಿರುಕುಳದಿಂದಾಗಿ ರಾಜಕೀಯದಿಂದ ದೂರ ಸರಿದು ಮತ್ತೆ ಧಾರವಾಡಕ್ಕೆ ಬಂದರು.

ರಾಜಕೀಯ ಪಯಣದ ನಂತರ 'ಮಾಜೀ ಮಂತ್ರಿ' ಕಾದಂಬರಿ ಹಾಗೂ 'ಕಂಪೋಜಿಟರ್' ಕವನಸಂಕಲನ ರಚನೆಯೊಂದಿಗೆ ಮತ್ತೆ ಕಟ್ಟೀಮನಿಯವರ ಸಾಹಿತ್ಯಯಾತ್ರೆ ಮತ್ತೆ ಆರಂಭವಾಯಿತು. ಮುಂದೆ **'ಸ್ವತಂತ್ರವ್ವ-30'** ಹೆಸರಿನ ಕಾದಂಬರಿ , **'ಕುಂದರನಾಡಿನ ಕಂದ'** ಎಂಬ ಹೆಸರಿನಲ್ಲಿ ಆತ್ಮಕಥೆಯನ್ನು ಬರೆಯಲು ಆರಂಭಿಸಿದರು. ಅದರ ಫಲಿತವೇ ಈ **'ಕಾದಂಬರಿಕನ ಕಥೆ'** ಕೃತಿಯಾಗಿದೆ. ಅಂತಿಮ ದಿನಗಳಲ್ಲಿ ಕಟ್ಟೀಮನಿ ತನ್ನೂರು ಮಲಾಮರಡಿಗೆ ಬಂದು ತಮ್ಮ ಎರಡನೆಯ ಮಗಳಾದ ನೀಲಮ್ಮನ ಮನೆಯಲ್ಲಿ ಕಳೆದರು. ಅಲ್ಲಿನ ಜನರು ನೀರಿಗಾಗಿ ಪಡುತ್ತಿದ್ದ ಪರಿಪಾಟಲನ್ನು ನೋಡಿ ಕೊಳವೆಬಾವಿಗಾಗಿ ಸರ್ಕಾರವನ್ನು ಎಚ್ಚರಿಸಲು ಉಪವಾಸ ಸತ್ಯಾಗ್ರಹ ಮಾಡಿದರು. ಅದರ ಫಲವಾಗಿ ಮಲಾಮರಡಿಗೆ ನೀರುಬಂದಿತು. ಅಲ್ಲಿನ ಜನರ ಕಷ್ಟಕರ್ಪಾಣ್ಯಕ್ಕೆ ಸ್ಪಂದಿಸಿ ಅವರ ಸಮಸ್ಯೆಗಳನ್ನು 'ಹರಿಜನಾಯಣ' ಕಾದಂದರಿ ಬರೆದರು. ಈ ಮಧ್ಯೆ 1980 ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳದ ಸರ್ವಾಧ್ಯಕ್ಷರಾಗಿ ಆಯ್ಕೆಯಾದರು. ಆ ಸಮಯದಲ್ಲಿ ನಾಡಿನಾದ್ಯಂತ ತಲೆದೋರಿದ್ದ ತ್ರಿಭಾಷಾಸೂತ್ರ ಹಿಂದಿ ಹೇರಿಕೆಯ ವಿರುದ್ಧ " ಹಿಂದಿಯನ್ನು ನಾವು ಕಲಿಯೋಣ. ಆದರೆ ಅದೊಂದೇ ರಾಷ್ಟ್ರಭಾಷೆ, ರಾಜ್ಯಭಾಷೆ ಎಂಬ ದುರಹಂಕಾರವನ್ನು ಮಾತ್ರ ಮೆಟ್ಟಿ ನಿಲ್ಲೋಣ. ನಮ್ಮ ಸಂವಿಧಾನದಲ್ಲಿ ಸೂಚಿತವಾಗಿರುವ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳೇ. ಅವೆಲ್ಲವುಗಳಿಗೂ ಏಕಪ್ರಕಾರದ ಗೌರವ ಸ್ಥಾನಮಾನ ಸಲ್ಲಬೇಕು. ಇವುಗಳನ್ನು ತುಳಿದು, ಹಿಂದಿಯನ್ನು ಮಾತ್ರ ಮೆರೆಯಿಸಬಯಸುವ, ಸ್ವಾರ್ಥ ಸಾಧಿಸಲೆತ್ನಿಸುವ ಧೂರ್ತರನ್ನು ನಾವು ಸದೆಬಡಿಯಬೇಕು" ಎಂದು ಗುಡಿಗಿದರು.

ಸಮ್ಮೇಳನಾಧ್ಯಕ್ಷರು ಒಂದು ವರ್ಷದ ಅವಧಿವರೆಗೂ ಕನ್ನಡಪರಕಾರ್ಯಗಳನ್ನು ಮಾಡಲು ಅವಕಾಶವಿದೆ. ಅದರಂತೆ ಕಟ್ಟೀಮನಿಯವರು ಕರ್ನಾಟಕದ ಉತ್ತರದ ತುದಿಯಾದ ಔರಾದಿಂದ ದಕ್ಷಿಣದ ಕಾಸರಾಗೂಡಿನವರೆಗೂ ನಾಡಿನ ಮೂಲೆ ಮೂಲೆಗೂ ಸಂಚರಿಸಿ ಕನ್ನಡ ಸಾಹಿತ್ಯ ಪರಿಷತ್ತು, ಸಾಹಿತ್ಯ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನೂರಾರು ಕನ್ನಡಪರ ಭಾಷಣಮಾಡಿ ಜನಜಾಗೃತಿಗೊಳಿಸಿದರು. ಹೀಗೆ ಕಟ್ಟೀಮನಿ **" ನಗು ಮನದಿ ಲೋಗರ ವಿಕಾರಂಗಳನು ನೋಡಿ, ಬಿಗಿ ತುಟಿಯ ದುಡಿವಂದು, ನೋವ ಪಡುವಂದು, ಪೊಗು ವಿಶ್ವಜೀವನದ ಜೀವಾಂತರಂಗದಲಿ ನಗುನಗುತ ಬಾಳ್, ತೆರಳು, ಮಂಕುತಿಮ್ಮ!** ಎಂಬ ನುಡಿಯಂತೆ ಬರೆಯುತ್ತಲೇ ಹೋರಾಡುತ್ತಲೇ ಜೀವ ಜೀವನ ಸವೆಸಿದರು. ಕನ್ನಡಸಾಹಿತ್ಯದ ಪ್ರಗತಿಶೀಲ ಪಂಥದ ಪ್ರಮುಖ ಬರಹಗಾರರಾಗಿ ಕಂಗೊಳಿಸಿದ ಕಟ್ಟೀಮನಿಯವರು ತಮ್ಮ ಹೋರಾಟ, ಕನ್ನಡಪರ ಚಿಂತನೆ ಹಾಗೂ ಸಾಹಿತ್ಯ ರಚನೆಯ ಮೂಲಕ ಶರಣ ಸಂತನಾಗಿ ಬಾಳಿ ಬದುಕಿದವರು. ಅವರ **'ಕಾದಂಬರಿಕಾರನ ಕಥೆ'** ಸಾಹಿತ್ಯರೂಪದಲ್ಲಿ ಆತ್ಮಕಥೆಯ ಸ್ವರೂಪ ಪಡೆದರೂ ಇದು ಕರ್ನಾಟಕದ ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೀಮಾಪುರುಷನೊಬ್ಬನ ಅಮೂಲ್ಯದಾಖಲೆಯ ಜೀವಂತದರ್ಶನವಾಗಿ ಮೂರ್ತರೂಪ ಪಡೆದಿದೆ ಎಂದರೆ ತಪ್ಪಾಗಲಾರದು.